KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-417/ UGCE/2022-23/ 1405 Date: 22 DEC 2022

## ಸುತ್ತೋಲೆ-5

ವಿಷಯ: 2022–23ನೇ ಸಾಲಿನ NEP ಅಡಿಯಲ್ಲಿಯ ಎಲ್ಲ ಸ್ನಾತಕ ಪದವಿಗಳ 1 ಹಾಗೂ 2ನೇ (ಸೆಮಿಸ್ಟರ / ನಾನ್ ಸೆಮಿಸ್ಟರ್ ಪದ್ಧತಿ) ಶೈಕ್ಷಣಿಕ ಅವಧಿಯ ಪರಿಷ್ಕೃತ ವೇಳಾಪಟ್ಟಿ ಕುರಿತು.

ಉಲ್ಲೇಖ:
1. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/277, ದಿ: 23.06.2022.
2. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/425, ದಿ: 12.07.2022.
3. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/593, ದಿ: 29.07.2022.
4. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/690, ದಿ:06.08.2022.
5. ಸರ್ಕಾರದ ಆದೇಶ ಸಂ. ಇಡಿ/217/ಯುಎನ್ಇ/2022,ಬೆಂಗಳೂರು, ದಿ: 17.08.2022.
6. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/745, ದಿ:18.08.2022
7. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 22-12-2022

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, 1ನೇ ಸೆಮಿಸ್ಟರ್‌ನ ಪ್ರಾರಂಭದ ಅವಧಿಯಲ್ಲಿ ಕೊಠಡಿಗಳ ಕೊರತೆಯಿಂದ ಹಾಗೂ ಸದರ ಅವಧಿಯಲ್ಲಿ ಮಹಾವಿದ್ಯಾಲಯಗಳ ಶಿಕ್ಷಕರು ಪರೀಕ್ಷಾ ಕಾರ್ಯದಲ್ಲಿ ತೊಡಗಿದ್ದರಿಂದ ತರಗತಿಗಳು ವೇಳಾಪಟ್ಟಿಯ ಅನುಸಾರ ಜರುಗಿರುವುದಿಲ್ಲವೆಂದು ವರದಿಯಾಗಿದೆ. ಕಾರಣ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, 2022–23ನೇ ಸಾಲಿನ NEP ಅಡಿಯಲ್ಲಿ ಎಲ್ಲ ಸ್ನಾತಕ ಪದವಿ **1ನೇ ಸೆಮಿಸ್ಟರ್‌ನ ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಮುಕ್ತಾಯದ ಅವಧಿಯನ್ನು ದಿನಾಂಕ: 24.12.2022ರ ಬದಲಾಗಿ ದಿನಾಂಕ: 25.01.2023ರ ವರೆಗೆ** ಮುಂದುವರೆಸಲಾಗಿದೆ.

ಆದ್ದರಿಂದ, NEP ಅಡಿಯಲ್ಲಿಯ ಎಲ್ಲ ಸ್ನಾತಕ ಪದವಿಗಳ 1ನೇ ಮತ್ತು 2ನೇ ಸೆಮಿಸ್ಟರ್ ಪರಿಷ್ಕೃತ ವೇಳಾಪಟ್ಟಿಯನ್ನು ಅನುಬಂಧ-1 ರಂತೆ ಅನುಸರಿಸುವುದು.

ಸದರ ಮಾಹಿತಿಯನ್ನು ಕ.ವಿ.ವಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಸುತ್ತೋಲೆಯಂತೆ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಅಡಕ: ಮೇಲಿನಂತೆ.

ಕುಲಸಚಿವರು

ಗೆ,

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ (CDC) / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸ್ವಾತಂತ್ರ್ಯದ ಅಮೃತ ಮಹೋತ್ಸವ

# NEP ಅಡಿಯಲ್ಲಿ ಎಲ್ಲ ಸ್ನಾತಕ ಪದವಿ ತರಗತಿಗಳಿಗೆ 1 ಮತ್ತು 2ನೇ ಸೆಮಿಸ್ಟರ್‌ನ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿ: 2022–23

| ಕ್ರಸಂ. | ವಿವರ | ದಿನಾಂಕ |
|---|---|---|
| | **NEP ಅಡಿಯಲ್ಲಿ 1ನೇ ಸೆಮಿಸ್ಟರ್‌ಗೆ ಪ್ರವೇಶ ಪ್ರಕ್ರಿಯೆಯ ವಿವರ** | |
| 1 | NEP ಅಡಿಯಲ್ಲಿ ಪದವಿ ತರಗತಿಗಳ 1ನೇ ಸೆಮಿಸ್ಟರ್‌ಗೆ ಪ್ರವೇಶಕ್ಕೆ UUCMS ಮುಖಾಂತರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಹಾಗೂ ಮಹಾವಿದ್ಯಾಲಯಗಳು ದಂಡ ರಹಿತ ಪ್ರವೇಶ ಪಡೆದುಕೊಳ್ಳುವ ಅವಧಿ | 24.06.2022 to 30.08.2022 |
| 2 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ ತರಗತಿಗಳಿಗೆ ರೂ. **670**/– ರಂತೆ ದಂಡದೊಂದಿಗೆ ಪ್ರವೇಶ ಪಡೆಯುವ ಅವಧಿ | 01.09.2022 to 07.09.2022 |
| 3 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ ತರಗತಿಗಳಿಗೆ ರೂ. **3993+671**/– ಒಟ್ಟು ರೂ. **4670**/– ರಂತೆ ಹೆಚ್ಚುವರಿ ದಂಡದೊಂದಿಗೆ ಪ್ರವೇಶ ಪಡೆದ ಅವಧಿ | 08.09.2022 to 15.09.2022 |
| 4 | ದಂಡ ರಹಿತ, ದಂಡಸಹಿತ ಮತ್ತು ಹೆಚ್ಚುವರಿ ದಂಡದೊಂದಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಕ್ರಮ ಸಂಖ್ಯೆ 1 ರಿಂದ 3 ರಂತೆ ಶುಲ್ಕವನ್ನು ಭರಣಾ ಮಾಡಿದ ಚಲನ್ ಹಾಗೂ ನಿಗದಿತ ಅವಶ್ಯಕ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ<br>**ವಿ.ಸೂ: ದಂಡ ರಹಿತ / ಸಹಿತ / ವಿಶೇಷ ದಂಡ ಸಹಿತ ಪ್ರವೇಶ ಪಡೆದ ವಿದ್ಯಾರ್ಥಿಗಳ ಯಾದಿಯನ್ನು UUCMSನಲ್ಲಿ "Submit to the University"ನ್ನು ಕಡ್ಡಾಯವಾಗಿ ನಿಗದಿತ ದಿನಾಂಕಗಳಂದೇ "Submit" ಮಾಡುವುದು.** | 20.09.2022 |
| | **NEP ಅಡಿಯಲ್ಲಿ 1ನೇ ಸೆಮಿಸ್ಟರ್ ಶೈಕ್ಷಣಿಕ ವರ್ಷ ಪ್ರಾರಂಭ** | |
| 5 | ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ NEP ಅಡಿಯಲ್ಲಿ ಪದವಿ ತರಗತಿಗಳ 1ನೇ ಸೆಮಿಸ್ಟರ್ ಶೈಕ್ಷಣಿಕ ವರ್ಷ ಪ್ರಾರಂಭದ ದಿನಾಂಕ | 01.09.2022 |
| 6 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್‌ನ **ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಮುಕ್ತಾಯದ ದಿನಾಂಕ ಹಾಗೂ ಮುಂದಿನ ದಿನಾಂಕದಿಂದ ರಜೆ ಪ್ರಾರಂಭ (ಕೊನೆಯ ದಿನಾಂಕದೊಳಗೆ ವಿಶ್ವವಿದ್ಯಾಲಯದ ಪ್ರಾಯೋಗಿಕ ಪರೀಕ್ಷೆಗಳನ್ನು ಮುಕ್ತಾಯಗೊಳಿಸತಕ್ಕದ್ದು)** | 25.01.2023 |
| 7 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ ಥಿಯರಿ ಪರೀಕ್ಷೆ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನದ ಅವಧಿ<br>ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು. | 27.01.2023 to 20.03.2023 |
| | **NEP ಅಡಿಯಲ್ಲಿ 2ನೇ ಸೆಮಿಸ್ಟರ್** | |
| 8 | NEP ಅಡಿಯಲ್ಲಿ ಪದವಿ ತರಗತಿಗಳ **2ನೇ** ಸೆಮಿಸ್ಟರ್ **ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಕೆಲಸದ ಪ್ರಾರಂಭದ ದಿನಾಂಕ** | 21.03.2023 |
| 9 | NEP ಅಡಿಯಲ್ಲಿ ಪದವಿ ತರಗತಿಗಳ **2ನೇ** ಸೆಮಿಸ್ಟರ್‌ನ **ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಮುಕ್ತಾಯದ ದಿನಾಂಕ ಹಾಗೂ ಮುಂದಿನ ದಿನಾಂಕದಿಂದ ರಜೆ ಪ್ರಾರಂಭ (ಕೊನೆಯ ದಿನಾಂಕದೊಳಗೆ ವಿಶ್ವವಿದ್ಯಾಲಯದ ಪ್ರಾಯೋಗಿಕ ಪರೀಕ್ಷೆಗಳನ್ನು ಮುಕ್ತಾಯಗೊಳಿಸತಕ್ಕದ್ದು)** | 08.07.2023 |
| 10 | NEP ಅಡಿಯಲ್ಲಿ ಪದವಿ ತರಗತಿಗಳ **2ನೇ** ಸೆಮಿಸ್ಟರ್ ಥಿಯರಿ ಪರೀಕ್ಷೆ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನದ ಅವಧಿ<br>ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು. | 09.07.2023 to 31.08.2023 |
| 11 | ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ NEP ಅಡಿಯಲ್ಲಿ ಪದವಿ ತರಗತಿಗಳ **3ನೇ ಸೆಮಿಸ್ಟರ್ ಶೈಕ್ಷಣಿಕ ವರ್ಷ ಪ್ರಾರಂಭದ ದಿನಾಂಕ** | 01.09.2023 |

*ಸೂಚನೆ:*

1. NEP ಅಡಿಯಲ್ಲಿ ಪದವಿ ತರಗತಿಗಳಿಗೆ (UUCMS) ಅಂತರ್ಜಾಲ https://uucms.karnataka.gov.in/ದ ಮುಖಾಂತರ ಮಾತ್ರ ಪ್ರವೇಶ ಪಡೆದುಕೊಳ್ಳತಕ್ಕದ್ದು. ಅನ್ಯ ಮಾರ್ಗಗಳ ಮುಖಾಂತರ ಪ್ರವೇಶ ಪಡೆದುಕೊಂಡಲ್ಲಿ ಮುಂದಿನ ಅಡೆ-ತಡೆಗಳಿಗೆ ಪ್ರಾಚಾರ್ಯರೇ ನೇರ ಹೊಣೆಗಾರರೆಂದು ಪರಿಗಣಿಸಲಾಗುವುದು.
2. ಕೋವಿಡ್–19 ಮಹಾಮಾರಿ ರೋಗದಿಂದ 2022–23ನೇ ಶೈಕ್ಷಣಿಕ ಅವಧಿಯು ನಷ್ಟವಾಗಿರುವುದನ್ನು ಸರಿದೂಗಿಸುವದನ್ನು ಗಮನದಲ್ಲಿರಿಸಿ ವೇಳಾಪಟ್ಟಿಯನ್ನು ತಯಾರಿಸಲಾಗಿದೆ.
3. ಮೇಲೆ ನಮೂದಿಸಿದ ದಿನಗಳು ರಜೆ ಎಂದು ಘೋಷಿಸಿದಲ್ಲಿ ತದನಂತರದ ದಿನವನ್ನು ಪರಿಗಣಿಸುವದು.
4. ಪರೀಕ್ಷೆಗಳ ವೇಳಾಪಟ್ಟಿಗಳನ್ನು ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ ಇವರು ಕಾಲಕಾಲಕ್ಕೆ ಪ್ರಕಟಿಸುವರು.
5. ದಂಡ ಸಹಿತವಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ರವಿವಾರ ಹಾಗೂ ರಜಾ ದಿನಗಳಲ್ಲಿ ವಿಶೇಷ ವರ್ಗಗಳನ್ನು ನಡೆಸಿ ಕನಿಷ್ಠ ಹಾಜರಾತಿ ಪೂರೈಸುವಂತೆ ನೋಡಿಕೊಳ್ಳಲು ಕೋರಲಾಗಿದೆ.
6. ಕಡ್ಡಾಯವಾಗಿ (UUCMS) ಅಂತರ್ಜಾಲ https://uucms.karnataka.gov.in/ನ್ನು ಆನ್‌ಲೈನ್ ಮುಖಾಂತರ ಭರಿಸುವುದು.
7. ಪ್ರವೇಶ ಯಾದಿಯ ಜೊತೆಗೆ ಪ್ರತಿಯೊಂದು ಅನುಬಂಧ / ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸುವದು. ತಪ್ಪಿದಲ್ಲಿ ಯಾದಿಯನ್ನು ಮರಳಿಸಲಾಗುವುದು.

ಕುಲಸಚಿವರು